**ಓ.ಎಸ್ 315/2013**

**ಡಿ.ಡಬ್ಲೂ-4**

ದಿನಾಂಕಃ **27.11.2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀಸವಾಲು ವಾದಿ ಪರ ಶ್ರೀ ಸಿ.ಎಸ್.ಎಸ್. ವಕೀಲರಿಂದಃ**

ಮುಖ್ಯ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರ ನನಗೆ ಗೊತ್ತು. ಸದರಿ ಪ್ರಮಾಣ ಪತ್ರವನ್ನು ರಾಮಚಂದ್ರಯ್ಯನವರು ಬರೆದಿರುತ್ತಾರೆ. ಸದರಿ ಪ್ರಮಾಣ ಪತ್ರವನ್ನು ಮನೆಯಲ್ಲಿ ಬರೆಸಿರುತ್ತಾರೆ. ಸದರಿ ಪ್ರಮಾಣ ಪತ್ರಕ್ಕೆ ನಾನು ಮನೆಯಲ್ಲಿಯೇ ಸಹಿ ಹಾಕಿರುತ್ತೇನೆ.

ನಮ್ಮ ಮನೆಯಲ್ಲಿ ನನ್ನ ತಮ್ಮನಾದ ಕೃಷ್ಣಕುಮಾರ ಒಬ್ಬನೇ ಪದವಿದರ ಎಂದರೆ ಸರಿ. ನಮ್ಮ ತಂದೆಗೆ ಮೂರು ಜನ ಗಂಡು ಮಕ್ಕಳು ಹಾಗೂ 7 ಜನ ಹೆಣ್ಣು ಮಕ್ಕಳು ಎಂದರೆ ಸರಿ. ನಾವೆಲ್ಲರೂ ಅಂಗಡಿಯಲ್ಲಿ ವ್ಯಾಪಾರ ಮಾಡುತ್ತಿದ್ದರು ಎಂದರೆ ಸಾಕ್ಷಿ ನಮ್ಮ ತಂದೆ, ನನ್ನ ತಮ್ಮ, ಅಣ್ಣ(ವಾದಿ) ಹಾಗೂ ನನ್ನ ಒಬ್ಬ ತಂಗಿ ಅನುರಾಧರವರು ಅಂಗಡಿಯಲ್ಲಿ ವ್ಯಾಪಾರ ಮಾಡುತ್ತಿದ್ದರು. ಸದರಿಯವರೆಲ್ಲರೂ ಸೇರಿ ಅಂಗಡಿಯಲ್ಲಿ ವ್ಯಾಪಾರ ಮಾಡಿ ಸಂಪಾದನೆ ಮಾಡುತ್ತಿದ್ದರು ಎಂದರೆ ಸರಿ. ಸದರಿ ಮಾಹಿತಿ ನನಗೆ ಗೊತ್ತು. ನಮ್ಮ ತಾಯಿಯವರಗಿಂತ ಮೊದಲು ನಮ್ಮ ತಂದೆಯವರು ಮೊದಲು ಮರಣ ಹೊಂದಿರುತ್ತಾರೆ. ನನ್ನ ಅಣ್ಣ ವಾದಿ ಚುರುಕಾದಂತ ವ್ಯಕ್ತಿ ಅಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆಗೆ ಜಮೀನು ಇದ್ದು ಅದನ್ನು ಮಾರಿರುತ್ತಾರೆಂದರೆ ಸರಿ. ಸದರಿ ಜಮೀನಿನ್ನು ಮಾರಿದ ದುಡ್ಡಿನಿಂದಲೇ ಮನೆಯನ್ನು ಖರೀದಿಸಿರುತ್ತಾರೆಂದರೆ ಸರಿ. ನಮ್ಮ ತಂದೆ, ಅಣ್ಣ ಮತ್ತು ತಮ್ಮಂದಿರು ಮತ್ತು ನಮ್ಮಗಳ ನಡುವೆ ಯಾವುದೇ ಆಸ್ತಿಗಳ ವಿಭಾಗ ಆಗಿಲ್ಲ ಎಂದರೆ ಸರಿ. ನಮ್ಮ ತಂದೆ 80 ವರ್ಷಗಳಿರುವಾಗ ಮರಣ ಹೊಂದಿರುತ್ತಾರೆ. ನಮ್ಮ ತಂದೆ ಮರಣ ಹೊಂದುವ 6 ತಿಂಗಳ ಮೊದಲು ಹಾಸಿಗೆ ಹಿಡಿದ್ದಿದ್ದರು ಎಂದರೆ ಸರಿಯಲ್ಲ.

ವಿಲ್ ನ್ನು ರಾಮಚಂದ್ರಯ್ಯನವರು ಮನೆಯಲ್ಲಿಯೇ ಬರೆದಿರುತ್ತಾರೆ. ಸದರಿ ವಿಲ್ ನ್ನು ಬರೆಯಲು ಮಾಹಿತಿ ನೀಡಿದವರು ಯಾರು ಎಂದರೆ ಸಾಕ್ಷಿ ನಮ್ಮ ತಂದೆ Guess (ಊಹಿಸಿ) ಅವರೇ ಬರೆಸಿರುತ್ತಾರೆಂದು ನುಡಿಯುತ್ತಾರೆ. ನಮ್ಮ ತಂದೆ 80 ವಯಸ್ಸಿನಲ್ಲಿ ತೀರಿಕೊಂಡಿದ್ದು ಎಂದು ನಾನು ಹೇಳಿದ್ದು ಅವರ ಮರಣದ ದಿನದ ವರೆಗೂ ಸಹ ಅವರು ಆರೋಗ್ಯದಿಂದ ಓಡಾಡಿಕೊಂಡು ಇದ್ದರು ಎಂದರೆ ಸರಿ. ವಿಲ್ ನ್ನು ಸುಮಾರು ಸಂಜೆ 5.30 ಸಮಯದಲ್ಲಿ ಬರೆಸಿರುತ್ತಾರೆ. ಸದರಿ ವಿಲ್ ನ್ನು ಬರೆಸಲು ಎಷ್ಟು ಸಮಯ ಆಗಿರುತ್ತದೆ ಎಂದರೆ ಸಾಕ್ಷಿ ಸಮಾರು ಒಂದು ಗಂಟೆ ಆಗಿರಬೇಕು ಸರಿಯಾಗಿ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ವಿಲ್ ಬರೆಸಿದ ನಂತರ 1999 ಮಾರ್ಚ ತಿಂಗಳು 10 ನೇ ದಿನಾಂಕದಂದು ನೊಂದಾಯಿಸಿರುತ್ತೇವೆ. ವಿಲ್ ನ್ನು ಬರೆದಿರುವ ದಿನಾಂಕ ನೆನಪಿರುವುದಿಲ್ಲ. ವಿಲ್ ನೊಂದಣಾ ಮಾಡುವ ಕಾಲಕ್ಕೆ ನಾನು ಕಛೇರಿಗೆ ಹೋಗಿರುತ್ತೇನೆ. ವಿಲ್ ನ್ನು ಸಂಜೆ 5.30

ಮೇಲೆ ಹೋಗಿ ನೊಂದಾಯಿಸಿರುತ್ತೇವೆ.

ನಿಡಿ-21 ರಲ್ಲಿರುವ ವಕ್ಕಣೆಯನ್ನ ಈ ಕೆಳಗಂಡಂತೆ ಸಾಕ್ಷಿಗೆ ಓದಿ ಹೇಳಲಾಗಿರುತ್ತದೆ. ನನಗೆ ತುಂಬಾ ವಯಸ್ಸಾಗಿರುತ್ತದೆ, ಇತ್ತೀಚೆಗೆ ಓಡಾಡಲು ಅನುಕುಲವಿಲ್ಲದೆ ಇರುವುದರಿಂದಲೂ ಮತ್ತು ಹಾಗಾಗ್ಗೆ ಸಣ್ಣ-ಪುಟ್ಟ ಕಾಯಿಲೆಗಳು ಬರುತ್ತಿರುವುದರಿಂದ ಯಾವ ಸಮಯದಲ್ಲಿ ಯಾವ ರೀತಿಯ ಅಪಾಯ ಸಂಭವಿಸಬಹುದೆಂದು ನನಗೆ ತೋರುತ್ತಿರುವುದರಿಂದ ಸದರಿ ಬಗ್ಗೆ ನಮೂದು ಮಾಡಿರುವ ಮಾಹಿತಿ ಸುಳ್ಳು ಅಥವಾ ನಿಜ ಎಂದು ಸಾಕ್ಷಿಗೆ ಪ್ರಶ್ನಿಸಲಾಗಿ ಸದರಿ ಅಂಶ ಸುಳ್ಳು ಎಂದು ನುಡಿದಿರುತ್ತಾರೆ.

ಜನವರಿ ತಿಂಗಳಿನಲ್ಲಿ ವಿಲ್ ಬರೆದು ನಮ್ಮ ತಂದೆಯವರ ಬಳಿಅಲ್ಲಿಯೇ ಇಟ್ಟುಕೊಂಡು ಮಾರ್ಚ ತಿಂಗಳಿನಲ್ಲಿ ರಿಜಿಸ್ಟರ್ ಮಾಡಿರುತ್ತಾರೆ. ಯಾವ ಕಾರಣಕ್ಕಾಗಿ ಸದರಿ ದಿನಗಳನ್ನು ಹಾಗೆ ನೊಂದಾಯಿಸಿದ ಇಟ್ಟುಕೊಂಡಿರುತ್ತಾರೆ ಎಂದರೆ ಸಾಕ್ಷಿ ಅದು ಅವರ ಇಚ್ಛೆ ಎಂದು ನುಡಿದಿರುತ್ತಾರೆ. ನಮ್ಮ ತಂದೆ ತೀರಿಹೋಗುವವರೆಗೂ ಅವರು 5 ನೇ ಪ್ರತಿವಾದಿಯವರ ಅಭಿರಕ್ಷೆಯಲ್ಲಿ ವಾಸಿಸುತ್ತಿದ್ದರು ಎಂದರೆ ಸರಿ. ನಮ್ಮ ತಂದೆಯವರಿಗೆ ಆರೋಗ್ಯ ಸರಿ ಇರಲಿಲ್ಲ, ಕೈ ಕಾಲು ಊದಿಕೊಂಡಿದ್ದು ಕೂತಲ್ಲಿಯೇ ಆಹಾರವನ್ನು ಸೇವಿಸಿಸುತ್ತಿದ್ದರು ಎಂದರೆ ಸರಿಯಲ್ಲ. ನಾನು ವಿಲ್ ನ್ನು ಓದಿ ಸಹಿ ಮಾಡಿರುತ್ತೇನೆ. ಅಸಲು ವಿಲ್ ನಮ್ಮ ತಂದೆಯ ಬಳಿ ಇದ್ದು, ಅವರ ಮರಣದ ನಂತರ 5 ನೇ ಪ್ರತಿವಾದಿ ಬಳಿ ಇದೆ. ಉಪನೋಂದಾಣಾಧಿಕಾರಿಗಳು ನಿಡಿ-21 ಕ್ಕೆ ನಮ್ಮ ಮನೆಗೆ ಬಂದು ಹೆಬ್ಬೆಟ್ಟಿನ ಗುರುತನ್ನು ಪಡೆದಿರುತ್ತಾರೆಂದರೆ ಸುಳ್ಳು.

ನನಗೂ ಮತ್ತು ನಮ್ಮ ಅಕ್ಕ-ತಂಗಿಯಂದಿರಿಗೂ ವಾದಿ ವಾಸುದೇವ ಗುಪ್ತ ರವರ ಕಂಡರೆ ವಿಶ್ವಾಸ ಇರಲಿಲ್ಲ ಎಂದರೆ ಸರಿಯಲ್ಲ. ಇಂದಿಗೂ ಸಹ ಅವರ ಮಕ್ಕಳು ಮತ್ತು ಹೆಂಡತಿಯನ್ನು ಕಂಡರೆ ಅಸಹ್ಯ ಮತ್ತು ಅವರ ಮನೆಗೆ ಹೋಗುವುದಿಲ್ಲ ಎಂದರೆ ಸರಿಯಲ್ಲ. 5 ನೇ ಪ್ರತಿವಾದಿಯನ್ನು ಕಂಡರೆ ನಮಗೆ ಬಹಳ ಪ್ರೀತಿ ಎಂದರೆ ಸಾಕ್ಷಿ ಅಣ್ಣ ಮತ್ತು ತಮ್ಮ ಇಬ್ಬರನ್ನು ಕಂಡರೆ ಪ್ರೀತಿ ಎಂದು ನುಡಿಯುತ್ತಾರೆ. ನಮ್ಮ ತಂದೆ ವಿಲ್ ನಲ್ಲಿ 5 ನೇ ಪ್ರತಿವಾದಿಗೆ ಯಾವ ಆಸ್ತಿಯನ್ನು ನೀಡಿರುತ್ತಾರೆಂದರೆ ಎಂದರೆ ಸಾಕ್ಷಿ ಪಶ್ಚಿಮ ಭಾಗದ ವಾಸದ ಮನೆ ಹಾಗೂ ಪಶ್ಚಿಮ ಭಾಗದ ಅಂಗಡಿಯನ್ನು ನೀಡಿರುತ್ತಾರೆಂದು ನುಡಿಯುತ್ತಾರೆ.

ಇಂದಿಗೂ 5 ನೇ ಪ್ರತಿವಾದಿರವರ ಮನೆಗೆ ಹೋಗುತ್ತಿರಾ ಎಂದರೆ ಸಾಕ್ಷಿ ಅವರು ಬೆಂಗಳೂರಿನಲ್ಲಿ ವಾಸವಿರುತ್ತಾರೆಂದು ನುಡಿಯುತ್ತಾರೆ. ಸದರಿ ಮನೆಯನ್ನು ಸಾರ್ವಜನಿಕ ಹೋಟೆಲ್ ನವರಿಗೆ ಬಾಡಿಗೆ ನೀಡಿರುತ್ತಾರೆ. ಸದರಿ ಹೋಟೆಲ್ ನಡೆಸಲು ಒಲೆಗಳನ್ನು ಹಾಕಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ಒಲೆಗಳಿಂದ ಹೊಗೆ ಹೋಗಲು ಮೇಲುಗಡೆ ಪೈಪ್ ಹಾಕಿರುತ್ತಾರೆಂದರೆ ಸರಿ. ವಾದಿಗಳು ಸದರಿ ಹೋಟೆಲ್ ಮೇಲ್ಗಡೆ ಅಂದರೆ 1 ನೇ ಮಹಡಿಯಲ್ಲಿ ವಾಸವಿರುತ್ತಾರೆಂದರೆ ಸರಿ. ಹೋಟೆಲ್ ನಿಂದ ಬರುವ ಹೊಗೆ ವಾದಿಗಳ ಮನೆಗೆ ಹೋಗುತ್ತದೆ ಎಂದರೆ ಸಾಕ್ಷಿ ಗ್ಯಾಸ್ ನಲ್ಲಿ ಅಡುಗೆ ಮಾಡುತ್ತಾರೆಂದರೆ ನುಡಿಯತ್ತಾರೆ. ಮನೆಯ ಎಡ ಭಾಗದಲ್ಲಿ 1 ನೇ ಮಹಡಿಗೆ ಹತ್ತಲು ಮೆಟ್ಟಿಲು ಇರುತ್ತದೆಂದರೆ ಸರಿ. ಸದರಿ

ಮನೆ ಸುಮಾರು 50 ರಿಂದ 60 ವರ್ಷದ ಮನೆ ಎಂದರೆ ಸರಿ. ಸದರಿ ಕೆಳಗಡೆ ಮನೆಯನ್ನು ರಿಪೇರಿ ಮಾಡಿದರೆ ಮೇಲ್ಗಡೆ ವಾಸಿಸುವಂತವರಿಗೆ ಅಪಾಯ ಎಂದರೆ ಸರಿ. 5 ನೇ ಪ್ರತಿವಾದಿಯವರಿಗೆ ಅಂಗಡಿಯ ಭಾಗವನ್ನು ನೀಡಿದ್ದು, ಸದರಿ ಭಾಗವನ್ನು ಮಾರಾಟ ಮಾಡಿಕೊಂಡಿರುತ್ತಾರೆಂದರೆ ಸರಿ. ವಾಸದ ಮನೆಯನ್ನು ಸಹ ಮಾರಲು ಸಿದ್ಧವಿರುತ್ತಾರೆಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 5 ನೇ ಪ್ರತಿವಾದಿಯ ಆಮೀಷಕ್ಕೆ ಒಳಗಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. 5 ನೇ ಪ್ರತಿವಾದಿ ಮೊಸದಿಂದ ದಾಖಲೆಗಳನ್ನು ಸೃಷ್ಟಿಸಿಕೊಂಡಿದ್ದರು ಸಹ ಅವರ ಪರ ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.